**ದಿನಾಂಕಃ 12-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಆರ್.ವಿ., ವಕೀಲರಿಂದ**

ನಾನು, ಸೀನಪ್ಪ ಹಾಗೂ 4 ನೇ ಪ್ರತಿವಾದಿ ಅಕ್ಕ-ಪಕ್ಕದ ಜಮೀನನವರಾಗಿರುತ್ತೇವೆ. ನನಗೆ ನನ್ನ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿರುವುದಿಲ್ಲ. ನನ್ನ ಜಮೀನಿನ ಚೆಕ್ಕುಬಂದಿ ಸಹಾ ನನಗೆ ಗೊತ್ತಿರುವುದಿಲ್ಲ. ನಾನು ಹಾಗೂ ನಮ್ಮ ಅಣ್ಣ-ತಮ್ಮಂದಿರು ಜಂಟಿಯಾಗಿ ಒಟ್ಟು 24 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತೇವೆ. ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಇರುವುದಿಲ್ಲ ಆದರೆ ನನ್ನ ತಾತ ಹಾಗೂ ತಂದೆಯ ಹೆಸರು ನಮ್ಮ ಜಮೀನಿನ ಪಹಣಿ ಪತ್ರಿಕೆಯಲ್ಲಿ

ಇರುತ್ತದೆ. ನಾನು ಯಾವ ಸರ್ವೇ ನಂಬರ್ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನಗೆ ಹೇಳಲು ಆಗುವುದಿಲ್ಲ ಆದರೆ ಅದು ನಮ್ಮ ಜಮೀನಿನ ಪಕ್ಕದ ಜಮೀನು ಆಗಿರುತ್ತದೆ. ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪಳವಳ್ಳಿ ಗ್ರಾಮದ ಸ.ನಂ. 415/1 ರ ಜಮೀನು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿ ಸ.ನಂ. 415/2 ರಲ್ಲಿ 3 ಎಕರೆ 3 ಗುಂಟೆ ಖರೀದಿಸಿರುತ್ತಾರೆ ಎಂದರೆ ಸರಿ. ಸರ್ವೇ ನಂ. 415/2 ರ ಜಮೀನಿನ ಪಹಣಿ ಪತ್ರಿಕೆಯಲ್ಲಿ 3 ಎಕರೆ 7 ಗುಂಟೆ ವಿಸ್ತೀರ್ಣ ಖರಾಬು ಸೇರಿ 4 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು 4 ನೇ ಪ್ರತಿವಾದಿ ಖರೀದಿಸಿರುವುದು 3 ಎಕರೆ 3 ಗುಂಟೆ ಮಾತ್ರ ಎಂದು ನುಡಿದಿರುತ್ತಾರೆ. ನಮ್ಮ ಊರಿನಲ್ಲಿ ಎಲ್ಲರೂ 4 ನೇ ಪ್ರತಿವಾದಿ 3 ಎಕರೆ 3 ಗುಂಟೆ ಖರೀದಿಸಿರುತ್ತಾರೆ ಎಂದು ಹೇಳುವ ಮೂಲಕ ನನಗೆ ಅದು ತಿಳಿದು ಬಂದಿರುತ್ತದೆ, ಆದರೆ ನಾನು ಯಾವುದೇ ಕ್ರಯಪತ್ರ ಹಾಗೂ ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ. 4 ನೇ ಪ್ರತಿವಾದಿ ಒಟ್ಟು 3 ಎಕರೆ 7 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕಃ 24.05.2014 ರಂದು 4 ನೇ ಪ್ರತಿವಾದಿ 1 ರಿಂದ 3 ನೇ ಪ್ರತಿವಾದಿಗಳಿಂದ 99,000/- ಕ್ಕೆ 3 ಎಕರೆ 7 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ಸದರಿ ಜಮೀನನ್ನು ಖರೀದಿಸಿದ ದಿನದಿಂದ ಇಲ್ಲಿಯವರೆಗೂ ತಾವೇ ಸ್ವಾಧೀನಾನುಭೋಗದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿ ಬೋರ್ ವೆಲ್ ಯಾವಾಗ ಹಾಕಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಬೋರೆವೆಲ್ ಅನ್ನು ಹಾಕಿಸಿರುತ್ತಾರೆ.

ವಾದಿ ಎಷ್ಟು ಅಡಿ ಆಳದಷ್ಟು ಬೋರ್ ವೆಲ್ ಹಾಕಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 4 ನೇ ಪ್ರತಿವಾದಿ ಯಾವ ದಿಕ್ಕಿನ ಕಡೆಯಿಂದ ಹಾಗೂ ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ಫೆನ್ಸಿಂಗ್ ಹಾಕುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಿನಾಂಕಃ 28.07.2005 ರಂದು ಸುಮಾರು 41,300/- ರೂ. ಗಳನ್ನು ಖರ್ಚು ಮಾಡಿ 4 ನೇ ಪ್ರತಿವಾದಿ ಬೋರ್ ಹಾಕಿಸಿದ್ದು ಸುಮಾರು ಎರಡುವರೆ ಇಂಚಿನಷ್ಟು ನೀರು ದೊರೆತಿದ್ದು ಅಂದಿನಿಂದ ಇಲ್ಲಿಯವರೆಗೆ ಸದರಿ ನೀರನ್ನು ಉಪಯೋಗಿಸಿಕೊಂಡು ಜಮೀನಿನಲ್ಲಿ ಬೆಳೆ ಸಹಾ ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿಯು ಬೋರ್ ಹಾಕಿಸಿದ್ದು 4 ನೇ ಪ್ರತಿವಾದಿಯೇ ಆದರೆ ಎಂದಿಗೂ ಅವರು ಜಮೀನಿನಲ್ಲಿ ಯಾವುದೇ ಬೆಳೆ ಇಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ತಮ್ಮ ಜಮೀನಿನ ಈಶಾನ್ಯ ದಿಕ್ಕಿನಲ್ಲಿ ಬೋರ್ ಹಾಕಿಸಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಯ ಜಮೀನಿನ ಮಧ್ಯದಲ್ಲಿ ಬಂಡೆಗಳು ಇರುತ್ತವೆ ಎಂದರೆ ಸಾಕ್ಷಿಯು ಜಮೀನಿನ ಮಧ್ಯದಲ್ಲಿ ಇರುವುದಿಲ್ಲ ಒಂದು ಕೊನೆಯಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿಯೇ ಸರ್ಕಾರದಿಂದ ಲೈಸೆನ್ಸ್ ಅನ್ನು ಪಡೆದು ಸದರಿ ಬೋರ್ ವೆಲ್ ಹಾಕಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಸೀನಪ್ಪ ರವರೇ ಹಾಕಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸೀನಪ್ಪ ರವರು ಯಾವುದೇ ಬೋರ್ ವೆಲ್ ಅನ್ನು ಹಾಕಿಸಿರುವುದಿಲ್ಲ, 4 ನೇ ಪ್ರತಿವಾದಿಯೇ ಸದರಿ ಬೋರ್ ವೆಲ್ ಅನ್ನು ಹಾಕಿಸಿದ್ದರೂ ಸಹಾ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(5 ರಿಂದ 8 ನೇ ಪ್ರತಿವಾದಿಗಳ ಪರ ಪಾಟೀ ಸವಾಲಿಗೆ ಕಾಲವಕಾಶ ನೀಡಿ ಮೂಂದುಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು **ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**